ಅ) ವಿವರಗಳನ್ನು ಅನುಬಂಧ - 1 ರಲ್ಲಿ ನೀಡಲಾಗಿದೆ.

ಇ) ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಈ) ವಿಸ್ತರಣೆಗೊಂಡಿರುವ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಪರಿಹರಿಸಲು ಅವಶ್ಯಕತೆ ಮತ್ತು ಅನುದಾನ ಲಭ್ಯತೆಗನುಗುಣವಾಗಿ ಹೊಸ ಕೊಳವೆಬಾವಿಗಳನ್ನು ಕೊರೆಯಿಸಲು ಪೈಪ್‌ಲೈನ್‌ಗಳನ್ನು ವಿಸ್ತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಅನುಬಂಧ - 1

ಮೈಸೂರು ಜಿಲ್ಲಾಪಂಚಾಯತ್ ವ್ಯಾಪ್ತಿಯಲ್ಲಿ ತಾಲ್ಲೂಕುವಾರು ಕೊರೆಯಲಾದ/ಕೆಟ್ಟಿರುವ ಕೊಳವೆಬಾವಿಗಳ ವಿವರ

ಕ್ರಮ ಸಂಖ್ಯೆ	ತಾಲ್ಲೂಕು	ಕೊರೆಯಲಾದ ಒಟ್ಟು ಕೊಳವೆಬಾವಿಗಳ ಸಂಖ್ಯೆ	ಕೆಟ್ಟಿರುವ ಕೊಳವೆಬಾವಿಗಳ ಸಂಖ್ಯೆ
1.	ಮೈಸೂರು	1285	30
2.	ನಂಜನಗೂಡು	1330	33
3.	ಟಿ.ನರಸೀಪುರ	1075	28
4.	ಕೆ.ಆರ್.ನಗರ	1102	19
5.	ಹುಣಸೂರು	1341	29
6.	ಪಿರಿಯಾಪಟ್ಟಣ	1364	60
7.	ಹೆಚ್.ಡಿ.ಕೋಟೆ	1320	22
	ಒಟ್ಟು	**8817**	**221**

ಖಾಸಗಿ ಕಾಲೇಜುಗಳಲ್ಲಿ ಸರ್ಕಾರದ ಮೆರಿಟ್ ಖೋಟಾಸೀಟು

1562 (1752) ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಸರ್ಕಾರದ ಮೆರಿಟ್ ಖೋಟಾದಡಿಯಲ್ಲಿ ಆಯ್ಕೆ ಮಾಡಿ ಪ್ರವೇಶ ಅವಕಾಶ ದೊರಕಿಸಿದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು?

ಆ) ಮೆರಿಟ್ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಸಮಯಕ್ಕೆ ಸರಿಯಾಗಿ ಕಳುಹಿಸದೆ ಖಾಸಗಿ ವೈದ್ಯಕೀಯ ಆಡಳಿತ ಮಂಡಳಿಗೆ ಹಿಂದಕ್ಕೆ ಬಿಟ್ಟುಕೊಟ್ಟ ಸ್ನಾತಕ ಸ್ನಾತಕ್ಕೋತರ ಸೀಟುಗಳ ಸಂಖ್ಯೆ ಎಷ್ಟು? ಯಾವ ಯಾವ ಖಾಸಗಿ ವಿದ್ಯಾಲಯಗಳಿಗೆ ಎಷ್ಟೆಷ್ಟು ಸೀಟು ಬಿಟ್ಟುಕೊಡಲಾಯಿತು? ಯಾವ ಯಾವ ವಿಷಯಗಳಲ್ಲಿ?

ಇ) ಸೀಟ್ ಮ್ಯಾಟ್ರಿಕ್ಸ್‌ಗಳನ್ನು ಸಮಯಕ್ಕೆ ಸರಿಯಾಗಿ ಮಾಡದೆ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದ ಅಧಿಕಾರಿಗಳಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಡಾ॥ ಎ. ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವಿವರ ಈ ಕೆಳಕಂಡಂತಿದೆ:

ವರ್ಷ	1997	1998	1999
ಸ್ನಾತಕ ಸಂಖ್ಯೆ	814	781	856
ಸ್ನಾತಕೋತ್ತರ ಸಂಖ್ಯೆ	134	145	151

ಆ) ಪ್ರವೇಶ ಪ್ರಕ್ರಿಯೆಯಲ್ಲಿ ತಡವಾಗಿರುವುದಿಲ್ಲವಾದ್ದರಿಂದ ಯಾವ ಮೆರಿಟ್ ಸೀಟುಗಳನ್ನು ಆಡಳಿತ ಮಂಡಳಿಗೆ ಬಿಟ್ಟು ಕೊಟ್ಟಿರುವುದಿಲ್ಲ.

ಇ) ಯಾವ ಮೆರಿಟ್ ಸೀಟುಗಳನ್ನು ಆಡಳಿತ ಮಂಡಳಿಗೆ ಬಿಟ್ಟು ಕೊಟ್ಟಿರುವುದಿಲ್ಲವಾದ್ದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರದ ಗಂಥಾಲಯಗಳಿಗೆ ಪುಸ್ತಕಗಳ ಖರೀದಿ

1563 (1753) ಶ್ರೀ ಎ. ರಾಮದಾಸ್ (ಕೃಷ್ಣರಾಜಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯ ಸರ್ಕಾರದ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಲು ವಾರ್ಷಿಕ ಎಷ್ಟು ಹಣ ನೀಡಲಾಗುತ್ತಿದೆ; ಕನ್ನಡ ಪುಸ್ತಕಗಳ ಖರೀದಿಗೆ ಎಷ್ಟು ಹಣ ಮತ್ತು ಇಂಗ್ಲೀಷ್ ಪುಸ್ತಕಗಳಿಗೆ ಎಷ್ಟು ಹಣ ನೀಡಲಾಗುವುದು.

ಆ) ರಾಜ್ಯದಲ್ಲಿರುವ ಗ್ರಂಥಾಲಯಗಳ ಸಂಖ್ಯೆ ಎಷ್ಟು? ಈ ಗ್ರಂಥಾಲಯಗಳಲ್ಲಿ ಓದಲು ಇರುವ ಪುಸ್ತಕಗಳ ಸಂಖ್ಯೆ ಎಷ್ಟು? ಎಷ್ಟು ಜನ ಇದರ ಲಾಭ ಪಡೆಯುತ್ತಿದ್ದಾರೆ?

ಇ) ಮೈಸೂರು ಸೆಂಟ್ರಲ್ ಲೈಬ್ರರಿ ಎಂದು ಪ್ರಾರಂಭವಾಯಿತು; ಎಷ್ಟು ಪುಸ್ತಕಗಳನ್ನು ಹೊಂದಿದೆ; ಈ ಲೈಬ್ರರಿಗೆ ಸ್ಥಳದ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ಲೈಬ್ರರಿಗೆ ನೀಡುತ್ತಿರುವ ಹಣ ಎಷ್ಟು;

ಈ) ಮೈಸೂರು ನಗರ ಪಾಲಿಕೆಯಿಂದ ಲೈಬ್ರರಿ ಸೆಸ್ ರೂಪದಲ್ಲಿ ಕಳೆದ 3 ವರ್ಷಗಳಲ್ಲಿ ಸಂಗ್ರಹವಾದ ಹಣ ಎಷ್ಟು;

ಉ) ಮೈಸೂರು ಲೈಬ್ರರಿಗೆ ಹೊಸ ಕಟ್ಟಡ ಕಟ್ಟುವ ಯೋಜನೆ ಸರ್ಕಾರಕ್ಕೆ ಇದೆಯೇ;

ಊ) ಹಾಗಿದ್ದಲ್ಲಿ ಎಂದಿನಿಂದ ಕಾರ್ಯ ಪ್ರಾರಂಭಮಾಡಲಾಗುವುದು;